# ಗುಲಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ.

**(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೊಳ ಪಟ್ಟಿದೆ)**

ನಿಗಮ ಕಾರ್ಯಾಲಯ
ಜೆಸ್ಕಾಂ ಗುಲಬರ್ಗಾ

ಸಂಖ್ಯೆ: ಜೆಸ್ಕಾಂ/ಪ್ರ.ವ್ಯ/ಉ.ಲೆ.ನಿ(ಮಾ.ಸಂ.ಅ)/ಜಿ-11-1304/14-15/18829 ದಿನಾಂಕ: 28.07.2014

## ಪ್ರಕಟಣೆ

**2014-15ನೇ ಸಾಲಿನ ರಾಷ್ಟ್ರೀಯ ಶಿಶಿಕ್ಷು (ಅಪ್ರೆಂಟಿಸ್) ತರಬೇತಿ ಯೋಜನೆಯಡಿ 6 ತಿಂಗಳು ಅವಧಿಯ ಸಿ.ಒ.ಇ. ವೃತ್ತಿ ತರಬೇತಿಗೆ ಅರ್ಹ ಶಿಶಿಕ್ಷುಗಳ ಆಯ್ಕೆಯ ಬಗ್ಗೆ ಪ್ರಕಟಣೆ.**

ಗು.ವಿ.ಸ.ಕಂ., ಕೈಗಾರಿಕ ತರಬೇತಿ ಕೇಂದ್ರ, ಗುಲಬರ್ಗಾ, ಇಲ್ಲಿ ನಡೆಸುವ 2014-15ನೇ ಸಾಲಿನ ಸಿ.ಒ.ಇ. ವೃತ್ತಿಯಲ್ಲಿ ಶಿಶಿಕ್ಷು (ಅಪ್ರೆಂಟಿಸ್) ತರಬೇತಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಕರೆಯಲಾಗಿದೆ.

1) **ಅಭ್ಯರ್ಥಿಯ ವಿದ್ಯಾರ್ಹತೆ:** ಎಸ್.ಎಸ್.ಎಲ್.ಸಿ. ತೇರ್ಗಡೆ ನಂತರ ಭಾರತ ಸರ್ಕಾರದಿಂದ ಎನ್.ಸಿ.ವಿ.ಟಿ. ಮಾನ್ಯತೆ ಪಡೆದಿರುವ ಮತ್ತು ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದ ಐ.ಟಿ.ಐ /ಐ.ಟಿ.ಸಿ ಸಂಸ್ಥೆಯ ಕುಶಲಕರ್ಮಿ ತರಬೇತಿ ಯೋಜನೆಯಡಿ ನಡೆಸುವ One Year Broad Based Basic Training in Electrical Sector under Center of Excellence scheme and Six months.
   In Operation and maintenance of equipment's used in HT and LT Sub-stations and cable Jointing.
   ತೇರ್ಗಡೆಯಾಗಿ, ರಾಷ್ಟ್ರೀಯ ವೃತ್ತಿ ಪ್ರಮಾಣ ಪತ್ರ ಹೊಂದಿರುವ ಅಭ್ಯರ್ಥಿಗಳು ಅರ್ಹರಾಗಿರುತ್ತಾರೆ.

2) **ಅಭ್ಯರ್ಥಿ ವಯಸ್ಸು:** ದಿನಾಂಕ: 19.08.2014 ಕ್ಕೆ 14 ವರ್ಷ ಮೇಲ್ಪಟ್ಟು ಮತ್ತು 40 ವರ್ಷ ಮೀರಿರಬಾರದು.

3) **ಶಿಶಿಕ್ಷು ವೇತನ:** ತರಬೇತಿ ಅವಧಿಯಲ್ಲಿ ಶಿಶಿಕ್ಷುಗಳು ಮಾಸಿಕ ರೂ. 2400/-(ಎರಡು ಸಾವಿರದ ನಾಲ್ಕುನೂರು ರೂಪಾಯಿ ಮಾತ್ರ) ಶಿಶಿಕ್ಷು ವೇತನ ಪಡೆಯಲು ಅರ್ಹರಾಗಿರುತ್ತಾರೆ.

4) **ಇತರೆ ಅರ್ಹತಾ ಮಾನದಂಡಗಳು:**
   - ಅಭ್ಯರ್ಥಿಗಳು ಕನ್ನಡ ಓದಲು ಮತ್ತು ಬರೆಯಲು ತಿಳಿದಿರಬೇಕು.
   - ಕರ್ನಾಟಕ ರಾಜ್ಯದ ಅಭ್ಯರ್ಥಿಗಳಿಗೆ ಮೊದಲು ಆದ್ಯತೆ ನೀಡಲಾಗುವುದು.
   - ಆರೋಗ್ಯವಂತ ದೃಢಕಾಯ ಅಭ್ಯರ್ಥಿಗಳಿಗೆ ಮೊದಲು ಆದ್ಯತೆ ನೀಡಲಾಗುವುದು.
   - ಅಂಗವಿಕಲರು ಅರ್ಜಿಯನ್ನು ಸಲ್ಲಿಸಲು ಅರ್ಹರಿರುವುದಿಲ್ಲ.
   - ತರಬೇತಿಯ ಅವಧಿಯಲ್ಲಿ ಅಭ್ಯರ್ಥಿಗಳು ಊಟ/ವಸತಿ ವ್ಯವಸ್ಥೆಯನ್ನು ಸ್ವಂತ ಖರ್ಚಿನಲ್ಲಿ ಮಾಡಿಕೊಳ್ಳತಕ್ಕದ್ದು.
   - ತರಬೇತಿಯ ಅವಧಿಯಲ್ಲಿ ತರಬೇತಿ ಸಂಸ್ಥೆಯ ನಿಯಮ/ಶಿಸ್ತು ಪಾಲಿಸತಕ್ಕದ್ದು.

**5) ಅರ್ಜಿ ಸಲ್ಲಿಸುವ ವಿಧಾನ:**

- ಪೂರ್ಣ ವಿವರವಿರುವ ಸ್ವಯಂ ಲಿಖಿತ ಅಥವಾ ಬೆರಳಚ್ಚು ಮಾಡಿದ ಅರ್ಜಿಗಳನ್ನು ಕೆಳಗೆ ಕಾಣಿಸಿರುವ ಅರ್ಜಿ ನಮೂನೆಯಂತೆ ಎಲ್ಲಾ ದಾಖಲೆಗಳೊಂದಿಗೆ "ಪ್ರಧಾನ ವ್ಯವಸ್ಥಾಪಕರು, (ಆ.ಮತ್ತುಮಾ.ಸಂ.ಅ), ನಿಗಮ ಕಛೇರಿ, ವಿದ್ಯುತ್ ಸರಬರಾಜು ಕಂಪನಿ, (ಜೆಸ್ಕಾಂ) ಗುಲಬರ್ಗಾರವರಿಗೆ ಸಲ್ಲಿಸತಕ್ಕದ್ದು.
- ಅರ್ಜಿಯೊಂದಿಗೆ, ಸಾಮಾನ್ಯ ಮತ್ತು ಪ್ರವರ್ಗ1, 11ಎ, 11ಬಿ, 111ಎ, 111ಬಿ ವರ್ಗಕ್ಕೆ ಸೇರಿದ ಅಭ್ಯರ್ಥಿಗಳು ರೂ. 50/-(ಐವತ್ತು ರೂಪಾಯಿ ಮಾತ್ರ) ಮೌಲ್ಯದ ಇಂಡಿಯನ್ ಪೋಸ್ಟಲ್ ಆರ್ಡರ್ ಮತ್ತು ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡಕ್ಕೆ ಸೇರಿದ ಅಭ್ಯರ್ಥಿಗಳು ರೂ. 25/-(ಇಪ್ಪತ್ತೈದು ರೂಪಾಯಿ ಮಾತ್ರ) ಮೌಲ್ಯದ ಇಂಡಿಯನ್ ಪೋಸ್ಟಲ್ ಆರ್ಡರನ್ನುಆರ್ಥಿಕ ಸಲಹೆಗಾರರು, ಗುಲಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತ ಗುಲಬರ್ಗಾ, ಇವರ ಹೆಸರಿನಲ್ಲಿ ಮಾತ್ರ 04.08.2014 ರಿಂದ 19.08.2014 ರವರೆಗೆ ಖರೀದಿಸಿ ಅರ್ಜಿಯೊಂದಿಗೆ ಲಗತ್ತಿಸಬೇಕು.
- ಅರ್ಜಿ ಕಳುಹಿಸುವ ಲಕೋಟೆಯ ಮೇಲೆ 2014-15ನೇ ಸಾಲಿನ **ಶಿಶಿಕ್ಷು ಆಯ್ಕೆಗೆ ಅರ್ಜಿ ಎಂದು ಸ್ಪಷ್ಟವಾಗಿ ಬರೆದಿರಬೇಕು.**

**6) ಅರ್ಜಿಯೊಂದಿಗೆ ಲಗತ್ತಿಸುವ ದಾಖಲೆಗಳು.**

- ಮೇಲೆ ತಿಳಿಸಿರುವಂತೆ ಇಂಡಿಯನ್ ಪೋಸ್ಟಲ್ಆರ್ಡರ್
- ಗೆಜೆಟೆಡ್ ಅಧಿಕಾರಿಗಳಿಂದ ದೃಢೀಕರಿಸಿದ ಎಸ್.ಎಸ್.ಎಲ್. ಸಿ. ಅಂಕಪಟ್ಟಿ (ಜೆರಾಕ್ಸ್ ಪ್ರತಿ)
- ಗೆಜೆಟೆಡ್ ಅಧಿಕಾರಿಗಳಿಂದ ದೃಢೀಕರಿಸಿದ ವರ್ಗಾವಣೆ ಪ್ರಮಾಣ ಪತ್ರ (ಟಿ.ಸಿ) (ಜೆರಾಕ್ಸ್ ಪ್ರತಿ)
- ಗೆಜೆಟೆಡ್ ಅಧಿಕಾರಿಗಳಿಂದ ದೃಢೀಕರಿಸಿದ ಕುಶಲಕರ್ಮಿ ಸಿ.ಒ.ಇ. ವೃತ್ತಿ ಪರೀಕ್ಷೆಯ ಅಂಕಪಟ್ಟಿ (ಜೆರಾಕ್ಸ್ ಪ್ರತಿ)
- ಗೆಜೆಟೆಡ್ ಅಧಿಕಾರಿಗಳಿಂದ ದೃಢೀಕರಿಸಿದ ಜಾತಿ ಪ್ರಮಾಣ ಪತ್ರ ಪರಿಶಿಷ್ಟ ಜಾತಿ/ಪಂಗಡ ಮತ್ತು ಹಿಂದುಳಿದ ವರ್ಗಗಳು (ಜೆರಾಕ್ಸ್ ಪ್ರತಿ)
- ಸರ್ಕಾರಿ ಆಸ್ಪತ್ರೆಯ ವೈದ್ಯಕೀಯ ಪ್ರಮಾಣ ಪತ್ರ (ಫಿಜಿಕಲ್ ಫಿಟನೆಸ ಸರ್ಟಿಫಿಕೇಟ) (ಜೆರಾಕ್ಸ್ ಪ್ರತಿ) ದಿನಾಂಕ 19.01.2014 ರಿಂದ ಈಚೆಗೆ ಪಡೆದಿದ್ದು
- ಗಣ್ಯ ವ್ಯಕ್ತಿ /ಗೆಜೆಟೆಡ್ ಅಧಿಕಾರಿಗಳಿಂದ ಪಡೆದ ಎರಡು ನಡತೆ ಪ್ರಮಾಣ ಪತ್ರ (ಜೆರಾಕ್ಸ್ ಪ್ರತಿ) 19.01.2014 ರಿಂದ ಈಚೆಗೆ ಪಡೆದಿದ್ದು
- ಇತ್ತೀಚಿನ ಮೂರು ಭಾವಚಿತ್ರ (ಪಾಸ್ ಪೋರ್ಟ ಸೈಜಿನದು) ಇದರಲ್ಲಿ ಒಂದನ್ನು ಅರ್ಜಿಗೆ ಅಂಟಿಸುವುದು.
- ಸ್ವ-ವಿಳಾಸವಿರುವ ರೂ.10/- ಮೌಲ್ಯದ ಅಂಚೆ ಚೀಟಿಯನ್ನು ಹಚ್ಚಿದ 4X9 ಇಂಚು ಅಳತೆಯ ಒಂದು ಲಕೋಟೆ.
- 371(ಜೆ) ಕಾಯ್ದೆ ಅಡಿಯಲ್ಲಿ ಬರುವ ಅಭ್ಯರ್ಥಿಗಳು ಸಂಬಂಧ ಪಟ್ಟ ಅಧಿಕಾರಿಗಳಿಂದ ನೀಡಿದ ಪ್ರಮಾಣ ಪತ್ರದ ಪ್ರತಿಯನ್ನು ತಪ್ಪದೆ ಲಗತ್ತಿಸುವದು. ಇದಕ್ಕೆ ತಪ್ಪಿದಲ್ಲಿ ಇಂಥ ಅರ್ಜಿಗಳನ್ನು ಹೈದ್ರಾಬಾದ ಕರ್ನಾಟಕ ಪ್ರದೇಶದ ವ್ಯಾಪ್ತಿಯಲ್ಲಿ ಬರುವದಿಲ್ಲವೆಂದು ಪರಿಗಣಿಸಲಾಗುವದು.

**7) ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಭರ್ತಿ ಮಾಡಿದ ಅರ್ಜಿಯಗಳನ್ನು ಎಲ್ಲಾ ಲಗತ್ತುಗಳೊಂದಿಗೆ**

ದಿನಾಂಕ: 04.08.2014 ರಿಂದ 19.08.2014 ಸಂಜೆ 4.00 ಗಂಟೆವರೆಗೆ ನೇರವಾಗಿ ಅಥವಾ ಅಂಚೆಯ ಮೂಲಕ ಈ ವಿಳಾಸಕ್ಕೆ ಪ್ರಧಾನ ವ್ಯವಸ್ಥಾಪಕರು (ಆ ಮತ್ತು ಮಾ.ಸಂ.ಅ) ನಿಗಮ ಕಛೇರಿ ಗು.ವಿ.ಸ.ಕಂ.ನಿ., ಸ್ಟೇಷನ್ ರೋಡ್ ಗುಲಬರ್ಗಾ, 585-102 ಇವರಿಗೆ ತಲುಪುವಂತೆ ಕಳುಹಿಸತಕ್ಕದ್ದು.

- ವಿಳಂಬವಾಗಿ ಸಲ್ಲಿಸುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.
- ಪೂರ್ಣ ವಿವರ ಇಲ್ಲದ ಮತ್ತು ದಾಖಲೆಗಳಿಲ್ಲದ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಯಾವುದೇ ಕಾರಣಕ್ಕೂ ಪೋಸ್ಟಲ್ ಆರ್ಡರಗಳನ್ನು ಹಿಂತಿರುಗಿಸಲಾಗುವುದಿಲ್ಲ. ಶಿಫಾರಸ್ಸು ತರುವ ಅಭ್ಯರ್ಥಿಗಳ ಅರ್ಜಿಯನ್ನು ತಿರಸ್ಕರಿಸಲಾಗುವುದು.
- ಯಾವುದೇ ರೀತಿಯ ಪತ್ರ ವ್ಯವಹಾರಗಳಿಗೆ ಆಸ್ಪದವಿರುವುದಿಲ್ಲ.
- ಒಟ್ಟು ಆಯ್ಕೆ : ಶಿಶಿಕ್ಷುಗಳ ಸಂಖ್ಯೆ: 70 (ಸಿ.ಒ.ಇ. ವೃತ್ತಿ)
- (ಅ) ಹೈದ್ರಾಬಾದ ಕರ್ನಾಟಕ ಪ್ರದೇಶ ನಿಯಂತ್ರಣ ಆದೇಶ ಕಾಯ್ದೆ ಕ್ರ.ಸಂ. 371(ಜೆ) ಅಡಿಯಲ್ಲಿ ಬರುವ ಅಭ್ಯರ್ಥಿಗಳನ್ನು ಶಿಶಿಕ್ಷು ತರಬೇತಿಗೆ ಆಯ್ಕೆ ಪಟ್ಟಿ.

| ಅರ್ಹತೆ | ಸಾ.ಅ | ಪಜಾ | ಪಪಂ | ವರ್ಗ1 | 2ಎ | 2ಬಿ | 3ಎ | 3ಬಿ | ಒಟ್ಟು |
|---|---|---|---|---|---|---|---|---|---|
| | 17 | 6 | 1 | 1 | 6 | 1 | 1 | 1 | 34 |
| ಮಹಿಳಾ ಅಭ್ಯರ್ಥಿ | 9 | 3 | 1 | 1 | 3 | 1 | 1 | 1 | 20 |
| ಕನ್ನಡ ಮಾಧ್ಯಮ ಅಭ್ಯರ್ಥಿ | 1 | – | – | – | – | – | – | – | 1 |
| ಯೋಜನೆಯಿಂದ ನಿರಾಶ್ರಿತಗೊಂಡ ಅಭ್ಯರ್ಥಿ | 1 | – | – | – | – | – | – | – | 1 |
| **ಒಟ್ಟು** | **28** | **9** | **2** | **2** | **9** | **2** | **2** | **2** | **56** |

- (ಬ) ಹೈದ್ರಾಬಾದ ಕರ್ನಾಟಕ ಪ್ರದೇಶ ವ್ಯಾಪ್ತಿಯಲ್ಲಿನ ಅಭ್ಯರ್ಥಿಗಳನ್ನು ಹೊರತು ಪಡಿಸಿ ಬೇರೆ ಪ್ರದೇಶದ ಅಭ್ಯರ್ಥಿಗಳ ಆಯ್ಕೆ ಪಟ್ಟಿ.

| ಅರ್ಹತೆ | ಸಾ.ಅ | ಪಜಾ | ಪಪಂ | ವರ್ಗ1 | 2ಎ | 2ಬಿ | 3ಎ | 3ಬಿ | ಒಟ್ಟು |
|---|---|---|---|---|---|---|---|---|---|
| | 5 | 1 | 1 | 1 | 1 | 1 | – | – | 10 |
| ಮಹಿಳಾ ಅಭ್ಯರ್ಥಿ | 2 | 1 | – | – | 1 | – | – | – | 4 |
| ಕನ್ನಡ ಮಾಧ್ಯಮ ಅಭ್ಯರ್ಥಿ | – | – | – | – | – | – | – | – | – |
| ಯೋಜನೆಯಿಂದ ನಿರಾಶ್ರಿತಗೊಂಡ ಅಭ್ಯರ್ಥಿ | – | – | – | – | – | – | – | – | – |
| **ಒಟ್ಟು** | **7** | **2** | **1** | **1** | **2** | **1** | – | – | **14** |

- ಶಿಶಿಕ್ಷುಗಳಿಗೆ ತರಬೇತಿ ಪೂರ್ಣಗೊಂಡ ನಂತರ ಉದ್ಯೋಗ ನೀಡಬೇಕೆಂದು ಗು.ವಿ.ಸ.ಕಂ.ನಿ.,ಗೆ ಯಾವುದೇ ಭಾದ್ಯತೆ ಇರುವುದಿಲ್ಲ. ಹಾಗೂ ಉದ್ಯೋಗ ಖಾತರಿಗಾಗಿ ಹಕ್ಕೋತ್ತಾಯ ಮಾಡಲು ಬರುವುದಿಲ್ಲ.

**ಉಪಲೆಕ್ಕ ನಿಯಂತ್ರಣಾಧಿಕಾರಿ**
**(ಮಾ.ಸಂ.ಅ)**
**ಗು.ವಿ.ಸ.ಕಂ.ನಿ. ಗುಲಬರ್ಗಾ.**

# ಅರ್ಜಿ ನಮೂನೆ

## ಗು.ವಿ.ಸ.ಕಂ. ಮಾ.ಸಂ.ಅಕೇಂದ್ರ ಗುಲಬರ್ಗಾ – 585102, ಕೇಂದ್ರಕ್ಕೆಅರ್ಜಿ

| ಭಾವಚಿತ್ರ |
|---|

1) ಇಂಡಿಯನ್ ಪೋಸ್ಟಲ್ ಆರ್ಡರ್
   ಅ) ಸಂಖ್ಯೆ ಮತ್ತು ದಿನಾಂಕ ______________
   ಆ) ಮೌಲ್ಯ :ರೂಪಾಯಿ ______________
2) ಅಭ್ಯರ್ಥಿಯ ಹೆಸರು : ______________
3) ಲಿಂಗ : (ಪುರುಷ/ಮಹಿಳೆ) ______________
4) ತಂದೆ/ತಾಯಿ/ಪೋಷಕರ ಹೆಸರು: ______________
5) ಹುಟ್ಟಿದ ದಿನಾಂಕ : (ಎಸ್,ಎಸ್,ಎಲ್.ಸಿ. ಅಂಕ ಪಟ್ಟಿಯಲ್ಲಿ ಇರುವಂತೆ)
6) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಸೇರಿದವರೆ ? ___________ ಹೌದು/ಇಲ್ಲ
7) ಇತರೆ ಹಿಂದುಳಿದ ವರ್ಗಗಳಿಗೆ (ಪ್ರವರ್ಗ1, 11ಎ, 11ಬಿ, 111ಎ, 111ಬಿ ಮತ್ತು ಸಾ.ಅ)
8) ಖಾಯಂ ಅಂಚೆ ವಿಳಾಸ: ______________________________________
9) ವಿದ್ಯಾರ್ಹತೆ: ____________________ ಎಸ್.ಎಸ್.ಎಲ್.ಸಿ. ಶೇಕಡಾವಾರು ಗಳಿಸಿದ ಅಂಕಗಳು : __________ ಕುಶಲಕರ್ಮಿ ಸಿ.ಒ.ಇ. ವೃತ್ತಿ ಪರೀಕ್ಷೆಯ ಶೇಕಡಾವಾರು ಗಳಿಸಿದ ಅಂಕಗಳು:________
10) ಲಗತ್ತು:
    1. ಇಂಡಿಯನ್ ಪೋಸ್ಟಲ್ ಆರ್ಡರ್
    2. ಎಸ್.ಎಸ್.ಎಲ್.ಸಿ ಅಂಕಪಟ್ಟಿ
    3. ಕುಶಲಕರ್ಮಿ ಸಿ.ಒ.ಇ. ವೃತ್ತಿ ಪರೀಕ್ಷೆಯ ಅಂಕಪಟ್ಟಿ
    4. ವರ್ಗಾವಣೆ ಪ್ರಮಾಣ ಪತ್ರ (ಟಿ.ಸಿ)
    5. ಜಾತಿ ಪ್ರಮಾಣ ಪತ್ರ
    6. ವೈದ್ಯಕೀಯ ಪ್ರಮಾಣ ಪತ್ರ
    7. ನಡತೆ ಪ್ರಮಾಣ ಪತ್ರ
    8. ಪಾಸ್ ಪೋರ್ಟ ಸೈಜಿನ ಇತ್ತಿಚಿನ 3 ಭಾವಚಿತ್ರಗಳು.
    9. ಸ್ವ–ವಿಳಾಸವಿರುವ ರೂ. 10/– ಮೌಲ್ಯದ ಅಂಚೆ ಚೀಟಿಯನ್ನು ಹಚ್ಚಿದ 4X9 ಇಂಚು ಅಳತೆಯ ಒಂದು ಲಕೋಟೆ.
    10. ಅಭ್ಯರ್ಥಿಗಳು ತರಬೇತಿ ಹೊಂದಿದ ಐ.ಟಿ.ಐ/ಐ.ಟಿ.ಸಿ ಸಂಸ್ಥೆಯ, ಎನ್.ಸಿ.ವಿ.ಟಿ ಭಾರತ ಸರ್ಕಾರದಿಂದ ಮಾನ್ಯತೆ ಪಡೆದ ಪತ್ರದ ಪ್ರತಿ.
    11. 371 (ಜೆ) ಕಾಯ್ದೆ ಅಡಿಯಲ್ಲಿ ಬರುವ ಅಭ್ಯರ್ಥಿಗಳು ಸಂಬಂಧ ಪಟ್ಟ ಅಧಿಕಾರಿಗಳಿಂದ ನೀಡಿದ ಪ್ರಮಾಣ ಪತ್ರದ ಪ್ರತಿಯನ್ನು ತಪ್ಪದೆ ಲಗತ್ತಿಸುವದು.
    12. ಈ ಮೇಲೆ ತಿಳಿಸಿರುವ ವಿವರಗಳು/ ಪ್ರಮಾಣಪತ್ರಗಳು ನಿಖರ ಹಾಗೂ ಸತ್ಯವೆಂದು ಪ್ರಮಾಣೀಕರಿಸಿರುತ್ತೇನೆ.

ಸ್ಥಳ :                                                    ಅರ್ಜಿದಾರರ ಸಹಿ

ದಿನಾಂಕ :

# ಗುಲಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೊಳ ಪಟ್ಟಿದೆ)

ನಿಗಮ ಕಾರ್ಯಾಲಯ
ಜೆಸ್ಕಾಂ ಗುಲಬರ್ಗಾ

ಸಂಖ್ಯೆ: ಜೆಸ್ಕಾಂ/ಪ್ರ.ವ್ಯ/ಉ.ಲೆ.ನಿ (ಮಾ.ಸಂ.ಅ)/ಜಿ-11-1304/14-15/ 18104 ದಿನಾಂಕ : 24.07.2014

## ಪ್ರಕಟಣೆ

**2014-15ನೇ ಸಾಲಿನ ರಾಷ್ಟ್ರೀಯ ಶಿಶಿಕ್ಷು (ಅಪ್ರೆಂಟಿಸ್) ತರಬೇತಿ ಯೋಜನೆಯಡಿ ಒಂದು ವರ್ಷದ ಅವಧಿಯ ಎಲೆಕ್ಟ್ರೀಷಿಯನ್ ವೃತ್ತಿ ತರಬೇತಿಗೆ ಅರ್ಹ ಶಿಶಿಕ್ಷುಗಳ ಆಯ್ಕೆಯ ಬಗ್ಗೆ ಪ್ರಕಟಣೆ.**

ಗು.ವಿ.ಸ.ಕಂ. ಕೈಗಾರಿಕ ತರಬೇತಿ ಕೇಂದ್ರ, ಗುಲಬರ್ಗಾ, ಇಲ್ಲಿ ನಡೆಸುವ 2014-15ನೇ ಸಾಲಿನ ಎಲೆಕ್ಟ್ರೀಷಿಯನ್ ವೃತ್ತಿಯಲ್ಲಿ ಶಿಶಿಕ್ಷು (ಅಪ್ರೆಂಟಿಸ್) ತರಬೇತಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಕರೆಯಲಾಗಿದೆ.

1. **ಅಭ್ಯರ್ಥಿಯ ವಿದ್ಯಾರ್ಹತೆ:** ಎಸ್.ಎಸ್.ಎಲ್.ಸಿ. ತೇರ್ಗಡೆ ನಂತರ ಭಾರತ ಸರ್ಕಾರದಿಂದ National Council for Vocational Training ಎನ್.ಸಿ.ವಿ.ಟಿ. ಮಾನತ್ಯೆ ಪಡೆದಿರುವ ಮತ್ತು ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದ ಐ.ಟಿ.ಐ/ ಐ.ಟಿ.ಸಿ ಸಂಸ್ಥೆಯ ಮೂಲಕ ಎರಡು ವರ್ಷ ಅವಧಿಯ (ಐ.ಟಿ.ಐ) ತರಬೇತಿ ಪಡೆದು, ಕುಶಲಕರ್ಮಿ ತರಬೇತಿ ಯೋಜನೆಯಡಿ ನಡೆಸುವ ವೃತ್ತಿ ಎಲೆಕ್ಟ್ರೀಷಿಯನ್ ಪರೀಕ್ಷೆಯಲ್ಲಿ ತೇರ್ಗಡೆಯಾಗಿ, ರಾಷ್ಟ್ರೀಯ ವೃತ್ತಿ ಪ್ರಮಾಣ ಪತ್ರ ಹೊಂದಿರುವ ಅಭ್ಯರ್ಥಿಗಳು ಅರ್ಹರಾಗಿರುತ್ತಾರೆ. State Council vocational Training (SCVT)/ಅಡಿಯಲ್ಲಿ Provisional Marks sheet (PMS)/State Trade Certificate (STC) ಅಂಕ ಪಟ್ಟಿ ಹೊಂದಿರುವ ಅಭ್ಯರ್ಥಿಗಳು ತರಬೇತಿಗೆ ಅರ್ಹರಿರುವದಿಲ್ಲ.
2. **ಅಭ್ಯರ್ಥಿ ವಯಸ್ಸು:** ದಿನಾಂಕ: 19.08.2014 ಕ್ಕೆ 14 ವರ್ಷ ಮೇಲ್ಪಟ್ಟು ಮತ್ತು 40 ವರ್ಷ ಮೀರಿರಬಾರದು.
3. **ಶಿಶಿಕ್ಷು ವೇತನ:** ತರಬೇತಿ ಅವಧಿಯಲ್ಲಿ ಶಿಶಿಕ್ಷುಗಳು ಮಾಸಿಕ ರೂ.2800/-(ಎರಡು ಸಾವಿರ ಎಂಟುನೂರ ರೂಪಾಯಿ ಮಾತ್ರ) ಶಿಶಿಕ್ಷು ವೇತನ ಪಡೆಯಲು ಅರ್ಹರಾಗಿರುತ್ತಾರೆ.
4. **ಇತರೆ ಅರ್ಹತಾ ಮಾನದಂಡಗಳು:**
   - ಅಭ್ಯರ್ಥಿಗಳು ಕನ್ನಡ ಓದಲು ಮತ್ತು ಬರೆಯಲು ತಿಳಿದಿರಬೇಕು.
   - ಕರ್ನಾಟಕ ರಾಜ್ಯದ ಅಭ್ಯರ್ಥಿಗಳಿಗೆ ಮೊದಲು ಆದ್ಯತೆ ನೀಡಲಾಗುವುದು.
   - ಆರೋಗ್ಯವಂತ ದೃಢಕಾಯ ಅಭ್ಯರ್ಥಿಗಳಿಗೆ ಮೊದಲು ಆದ್ಯತೆ ನೀಡಲಾಗುವುದು.
   - ಅಂಗವಿಕಲರು ಅರ್ಜಿಯನ್ನು ಸಲ್ಲಿಸಲು ಅರ್ಹರಿರುವುದಿಲ್ಲ.
   - ತರಬೇತಿಯ ಅವಧಿಯಲ್ಲಿ ಅಭ್ಯರ್ಥಿಗಳು ಊಟ/ವಸತಿ ವ್ಯವಸ್ಥೆಯನ್ನು ಸ್ವಂತ ಖರ್ಚಿನಲ್ಲಿ ಮಾಡಿಕೊಳ್ಳತಕ್ಕದ್ದು.
   - ತರಬೇತಿಯ ಅವಧಿಯಲ್ಲಿ ತರಬೇತಿ ಸಂಸ್ಥೆಯ ನಿಯಮ/ಶಿಸ್ತು ಪಾಲಿಸತಕ್ಕದ್ದು.
5. **ಅರ್ಜಿ ಸಲ್ಲಿಸುವ ವಿಧಾನ:**
   - ಪೂರ್ಣ ವಿವರವಿರುವ ಸ್ವಯಂ ಲಿಖಿತ ಅಥವಾ ಬೆರಳಚ್ಚು ಮಾಡಿದ ಅರ್ಜಿಗಳನ್ನು ಕೆಳಗೆ ಕಾಣಿಸಿರುವ ಅರ್ಜಿ ನಮೂನೆಯಂತೆ ಎಲ್ಲಾ ದಾಖಲೆಗಳೊಂದಿಗೆ ದಿನಾಂಕ: 04.08.2014 ರಿಂದ 19.08.2014 ರ ಮಧ್ಯಾಹ್ನ 4: ಗಂಟೆವರೆಗೆ "ಪ್ರಧಾನ ವ್ಯವಸ್ಥಾಪಕರು, (ಆ ಮತ್ತು ಮಾ.ಸಂ.ಅ), ನಿಗಮ ಕಛೇರಿ, ಗುಲಬರ್ಗಾ ವಿದ್ಯುತ್ ಸರಬರಾಜು ಕಂಪನಿ, (ಜೆಸ್ಕಾಂ) ಗುಲಬರ್ಗಾರವರಿಗೆ ಸಲ್ಲಿಸತಕ್ಕದ್ದು.
   - ಅರ್ಜಿಯೊಂದಿಗೆ ಸಾಮಾನ್ಯ ಮತ್ತು ಪ್ರವರ್ಗ.1, 11ಎ, 11ಬಿ, 111ಎ, 111ಬಿ ವರ್ಗಕ್ಕೆ ಸೇರಿದ ಅಭ್ಯರ್ಥಿಗಳು ರೂ. 50/-(ಐವತ್ತು ರೂಪಾಯಿ ಮಾತ್ರ) ಮೌಲ್ಯದ ಇಂಡಿಯನ್ ಪೋಸ್ಟಲ್ ಆರ್ಡರ್ ಮತ್ತು ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡಕ್ಕೆ ಸೇರಿದ ಅಭ್ಯರ್ಥಿಗಳು ರೂ. 25/- (ಇಪ್ಪತ್ತೈದು ರೂಪಾಯಿ ಮಾತ್ರ) ಮೌಲ್ಯದ ಇಂಡಿಯನ್ ಪೋಸ್ಟಲ್ ಆರ್ಡರನ್ನು ಆರ್ಥಿಕ ಸಲಹೆಗಾರರು, ಗುಲಬರ್ಗಾ, ವಿದ್ಯುತ್ ಸರಬರಾಜು ಕಂಪನಿ ನಿಯಮಿತ ಗುಲಬರ್ಗಾ, ಇವರ ಹೆಸರಿನಲ್ಲಿ 04.08.2014 ರಿಂದ 19.08.2014 ರ ವರೆಗೆ ಖರೀದಿಸಿ ಅರ್ಜಿಯೊಂದಿಗೆ ಲಗತ್ತಿಸಬೇಕು.
   - ಅರ್ಜಿ ಕಳುಹಿಸುವ ಲಕೋಟೆಯ ಮೇಲೆ 2014-15ನೇ ಸಾಲಿನ ಶಿಶಿಕ್ಷು ಆಯ್ಕೆಗೆ ಅರ್ಜಿಎಂದು ಸ್ಪಷ್ಟವಾಗಿ ಬರೆದಿರಬೇಕು.

6. **ಅರ್ಜಿಯೊಂದಿಗೆ ಲಗತ್ತಿಸುವ ದಾಖಲೆಗಳು.**

- ಮೇಲೆ ತಿಳಿಸಿರುವಂತೆ ಇಂಡಿಯನ್ ಪೋಸ್ಟಲ್ ಆರ್ಡರ್
- ಗೆಜೆಟೆಡ್ ಅಧಿಕಾರಿಗಳಿಂದ ದೃಢೀಕರಿಸಿದ ಎಸ್.ಎಸ್.ಎಲ್. ಸಿ. ಅಂಕಪಟ್ಟಿ (ಜೆರಾಕ್ಸ್ ಪ್ರತಿ)
- ಗೆಜೆಟೆಡ್ ಅಧಿಕಾರಿಗಳಿಂದ ದೃಢೀಕರಿಸಿದ ವರ್ಗಾವಣೆ ಪ್ರಮಾಣ ಪತ್ರ (ಟಿ.ಸಿ) (ಜೆರಾಕ್ಸ್ ಪ್ರತಿ)
- ಗೆಜೆಟೆಡ್ ಅಧಿಕಾರಿಗಳಿಂದ ದೃಢೀಕರಿಸಿದ ಕುಶಲಕರ್ಮಿ ಎಲೆಕ್ಟ್ರೀಷಿಯನ್ ವೃತ್ತಿ ಪರೀಕ್ಷೆಯ ಅಂಕಪಟ್ಟಿ (ಜೆರಾಕ್ಸ್ ಪ್ರತಿ)
- ಗೆಜೆಟೆಡ್ ಅಧಿಕಾರಿಗಳಿಂದ ದೃಢೀಕರಿಸಿದ ಜಾತಿ ಪ್ರಮಾಣ ಪತ್ರ ಪರಿಶಿಷ್ಟ ಜಾತಿ/ಪಂಗಡ ಮತ್ತು ಹಿಂದುಳಿದ ವರ್ಗಗಳು (ಜೆರಾಕ್ಸ್ ಪ್ರತಿ)
- ಸರ್ಕಾರಿ ಆಸ್ಪತ್ರೆಯ ವೈದ್ಯಕೀಯ ಪ್ರಮಾಣ ಪತ್ರ (ಫಿಜಿಕಲ್ ಪಿಟನೇಸ್ ಸರ್ಟಿಫಿಕೇಟ) (ಜೆರಾಕ್ಸ್ ಪ್ರತಿ) ದಿನಾಂಕ: 19.01.2014. ರಿಂದ ಇತ್ತಿಚೀಗೆ ಪಡೆದಿದ್ದು.
- ಗಣ್ಯವ್ಯಕ್ತಿ/ಗೆಜೆಟೆಡ್ ಅಧಿಕಾರಿಗಳಿಂದ ಪಡೆದ ಎರಡು ನಡೆತೆ ಪ್ರಮಾಣ ಪತ್ರ (ಜೆರಾಕ್ಸ್ ಪ್ರತಿ) ದಿನಾಂಕ: 19.01.2014 ರಿಂದ ಇತ್ತಿಚೀಗೆ ಪಡೆದಿದ್ದು.
- ಇತ್ತೀಚಿನ ಮೂರು ಭಾವಚಿತ್ರ (ಪಾಸ್ ಪೋರ್ಟ ಸೈಜಿನದು) ಇದರಲ್ಲಿ ಒಂದನ್ನು ಅರ್ಜಿಗೆ ಅಂಟಿಸುವದು.
- ಸ್ವ-ವಿಳಾಸವಿರುವ ರೂ.10/-ಮೌಲ್ಯದ ಅಂಚೆ ಚೀಟಿಯನ್ನು ಹಚ್ಚಿದ 4X9 ಇಂಚು ಅಳತೆಯ ಒಂದು ಲಕೋಟೆ.
- ಅಭ್ಯರ್ಥಿಗಳು ತರಬೇತಿ ಹೊಂದಿದ ಐ.ಟಿ.ಐ/ಐ.ಟಿ.ಸಿ. ಸಂಸ್ಥೆಯ, ಎನ್.ಸಿ.ವಿ.ಟಿ ಭಾರತ ಸರ್ಕಾರದಿಂದ ಮಾನ್ಯತೆ ಪಡೆದ ಪತ್ರದ (ಜೆರಾಕ್ಸ್ ಪ್ರತಿಯನ್ನು) ತರಬೇತಿ ಸಂಸ್ಥೆಯಿಂದ ಪಡೆದು ಸಲ್ಲಿಸುವುದು.
- 371 (ಜೆ) ಕಾಯ್ದೆ ಅಡಿಯಲ್ಲಿ ಬರುವ ಅಭ್ಯರ್ಥಿಗಳು ಸಂಬಂಧ ಪಟ್ಟ ಅಧಿಕಾರಿಗಳಿಂದ ನೀಡಿದ ಪ್ರಮಾಣ ಪತ್ರದ ಪ್ರತಿಯನ್ನು ತಪ್ಪದೆ ಲಗತ್ತಿಸುವದು. ಇದಕ್ಕೆ ತಪ್ಪಿದಲ್ಲಿ ಇಂಥ ಅರ್ಜಿಗಳನ್ನು ಹೈದ್ರಾಬಾದ ಕರ್ನಾಟಕ ಪ್ರದೇಶದ ವ್ಯಾಪ್ತಿಯಲ್ಲಿ ಬರುವದಿಲ್ಲವೆಂದು ಪರಿಗಣಿಸಲಾಗುವದು.
- **ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:-** ಭರ್ತಿ ಮಾಡಿದ ಅರ್ಜಿಗಳನ್ನು ಎಲ್ಲಾ ಲಗತ್ತಿನೊಡನೆ ದಿನಾಂಕ: 04.08.2014 ರಿಂದ 19.08.2014. ಸಂಜೆ 4.00 ಗಂಟೆಯೊಳಗೆ ನೇರವಾಗಿ ಅಥವಾ ಅಂಚೆಯ ಮೂಲಕ ಪ್ರಧಾನ ವ್ಯವಸ್ಥಾಪಕರು (ಆ ಮತ್ತು ಮಾ.ಸಂ.ಅ) ನಿಗಮ ಕಛೇರಿ ಗು.ವಿ.ಸ.ಕಂ.ನಿ., ಸ್ಟೇಷನ್ ರೋಡ್ ಗುಲಬರ್ಗಾ, 585-102 ಇವರಿಗೆ ತಲುಪುವಂತೆ ಕಳುಹಿಸತಕ್ಕದ್ದು.
- ದಿನಾಂಕ : 19.08.2014 ರ ಸಂಜೆ 4: ಗಂಟೆ ನಂತರ ಬರುವ/ಸಲ್ಲಿಸುವ ಅರ್ಜಿಗಳನ್ನು ಪರಿಗಣಿಸಲಾಗುವದಿಲ್ಲ.
- ಪೂರ್ಣ ವಿವರ ಮತ್ತು ದಾಖಲೆಗಳಿಲ್ಲದ ಅರ್ಜಿಯನ್ನು ತಿರಸ್ಕರಿಸಲಾಗುವುದು.
- ಯಾವುದೇ ಕಾರಣಕ್ಕೂ ಪೋಸ್ಟಲ್ ಆರ್ಡರಗಳನ್ನು ಹಿಂತಿರುಗಿಸಲಾಗುವುದಿಲ್ಲ.
- ಶಿಫಾರಸ್ಸು ತರುವ ಅಭ್ಯರ್ಥಿಗಳ ಅರ್ಜಿಯನ್ನು ತಿರಸ್ಕರಿಸಲಾಗುವುದು.
- ಯಾವುದೇ ರೀತಿಯ ಪತ್ರ ವ್ಯವಹಾರಗಳಿಗೆ ಆಸ್ಪದವಿರುವುದಿಲ್ಲ.
- ಒಟ್ಟು ಆಯ್ಕೆ :ಐಟಿಐ/ಐಟಿಸಿ (ಎಲೆಕ್ಟ್ರೀಷಿಯನ್ ವೃತ್ತಿ) ಯಲ್ಲಿ ಗರಿಷ್ಟ ಅಂಕಗಳ ಆಧಾರದ ಮೇಲೆ ಮೀಸಲಾತಿ ರೋಸ್ಟರ ಪ್ರಕಾರ 80 ಶಿಶಿಕ್ಷುಗಳನ್ನು ಆಯ್ಕೆ ಮಾಡಿಕೊಳ್ಳಲಾಗುವದು.
- (ಅ) ಹೈದ್ರಾಬಾದ ಕರ್ನಾಟಕ ಪ್ರದೇಶ ನಿಯಂತ್ರಣ ಆದೇಶ ಕಾಯ್ದೆ ಕ್ರ.ಸಂ. 371 (ಜೆ) ಅಡಿಯಲ್ಲಿ ಬರುವ ಅಭ್ಯರ್ಥಿಗಳನ್ನು ಶಿಶಿಕ್ಷು ತರಬೇತಿಗೆ ಆಯ್ಕೆ ಪಟ್ಟಿ.

| | ಸಾ.ಅ | ಪಜಾ | ಪಪಂ | ಸಿ.1 | ಸಿ.2ಎ | ಸಿ.2ಬಿ | ಸಿ.3ಎ | ಸಿ.3ಬಿ | ಒಟ್ಟು |
|---|---|---|---|---|---|---|---|---|---|
| ಅರ್ಹತೆ | 20 | 7 | 1 | 2 | 7 | 2 | 1 | 1 | 41 |
| ಮಹಿಳಾ ಅಭ್ಯರ್ಥಿ | 10 | 3 | 1 | 1 | 3 | 1 | 1 | 1 | 21 |
| ಕನ್ನಡ ಮಾಧ್ಯಮ ಅಭ್ಯರ್ಥಿ | 1 | - | - | - | - | - | - | - | 1 |
| ಯೋಜನೆಯಿಂದ ನಿರಾಶ್ರಿತಗೊಂಡ ಅಭ್ಯರ್ಥಿ | 1 | - | - | - | - | - | - | - | 1 |
| **ಒಟ್ಟು** | **32** | **10** | **2** | **3** | **10** | **3** | **2** | **2** | **64** |

- (ಬ) ಹೈದ್ರಾಬಾದ ಕರ್ನಾಟಕ ಪ್ರದೇಶ ವ್ಯಾಪ್ತಿಯಲ್ಲಿನ ಅಭ್ಯರ್ಥಿಗಳನ್ನು ಹೊರತು ಪಡಿಸಿ ಬೇರೆ ಪ್ರದೇಶದ ಅಭ್ಯರ್ಥಿಗಳ ಆಯ್ಕೆ ಪಟ್ಟಿ.

| | ಸಾ.ಅ | ಪಜಾ | ಪಪಂ | ಸಿ.1 | ಸಿ.2ಎ | ಸಿ.2ಬಿ | ಸಿ.3ಎ | ಸಿ.3ಬಿ | ಒಟ್ಟು |
|---|---|---|---|---|---|---|---|---|---|
| ಅರ್ಹತೆ | 5 | 2 | 1 | 1 | 1 | 1 | – | – | 11 |
| ಮಹಿಳಾ ಅಭ್ಯರ್ಥಿ | 3 | 1 | – | – | 1 | – | – | – | 5 |
| ಕನ್ನಡ ಮಾಧ್ಯಮ ಅಭ್ಯರ್ಥಿ | – | – | – | – | – | – | – | – | – |
| 0ಯೋಜನೆಯಿಂದ ನಿರಾಶ್ರಿತಗೊಂಡ ಅಭ್ಯರ್ಥಿ | – | – | – | – | – | – | – | – | – |
| **ಒಟ್ಟು** | 8 | 3 | 1 | 1 | 2 | 1 | – | – | 16 |

- ಶಿಶಿಕ್ಷುಗಳಿಗೆ ತರಬೇತಿ ಪೂರ್ಣಗೊಂಡ ನಂತರ ಉದ್ಯೋಗ ನೀಡಬೇಕೆಂದು ಗು.ವಿ.ಸ.ಕಂ.ನಿ.,ಗೆ ಯಾವುದೇ ಭಾದ್ಯತೆ ಇರುವುದಿಲ್ಲ. ಹಾಗೂ ಉದ್ಯೋಗ ಖಾತರಿಗಾಗಿ ಹಕ್ಕೋತ್ತಾಯ ಮಾಡಲು ಬರುವುದಿಲ್ಲ.
- ಅನುಕ್ರಮ–1 ರಲ್ಲಿ ಕಾಣಿಸಿದ ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿಗಳ ಮಾತ್ರ ಅರ್ಜಿಗಳನ್ನು ಸಲ್ಲಿಸತಕ್ಕದ್ದು.

ಉಪಲೆಕ್ಕ ನಿಯಂತ್ರಣಾಧಿಕಾರಿ
(ಮಾ.ಸಂ.ಅ)
ಗು.ವಿ.ಸ.ಕಂ.ನಿ. ಗುಲಬರ್ಗಾ.

ಸದರಿ ಮಾಹಿತಿಯನ್ನು www.gescom.in ನಲ್ಲಿ ಸಹ ಪಡೆಯಬಹುದಾಗಿದೆ.

# ಅರ್ಜಿ ನಮೂನೆ

**ಗು.ವಿ.ಸ.ಕಂ. ಮಾ.ಸಂ.ಅಕೇಂದ್ರ ಗುಲಬರ್ಗಾ – 585102, ಕೇಂದ್ರಕ್ಕೆಅರ್ಜಿ**

| ಭಾವಚಿತ್ರ |
|---|

1) ಇಂಡಿಯನ್ ಪೋಸ್ಟಲ್ಆರ್ಡರ್

   ಅ) ಸಂಖ್ಯೆ ಮತ್ತು ದಿನಾಂಕ ---------------

   ಆ) ಮೌಲ್ಯ :ರೂಪಾಯಿ ---------------

2) ಅಭ್ಯರ್ಥಿಯ ಹೆಸರು : ---------------

3) ಲಿಂಗ : (ಪುರುಷ/ಮಹಿಳೆ) ---------------

4) ತಂದೆ/ತಾಯಿ/ಪೋಷಕರ ಹೆಸರು: ---------------

5) ಹುಟ್ಟಿದ ದಿನಾಂಕ : (ಎಸ್,ಎಸ್,ಎಲ್.ಸಿ. ಅಂಕಪಟ್ಟಿಯಲ್ಲಿಇರುವಂತೆ)

6) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಕ್ಕೆ ಸೇರಿದವರೆ ? ------------ ಹೌದು/ಇಲ್ಲ

7) ಇತರೆ ಹಿಂದುಳಿದ ವರ್ಗಗಳಿಗೆ (ಪ್ರವರ್ಗ1, 11ಎ, 11ಬಿ, 111ಎ, 111ಬಿ ಮತ್ತು ಸಾ.ಅ)

8) ಖಾಯಂ ಅಂಚೆ ವಿಳಾಸ: ------------------------------------------

9) ವಿದ್ಯಾರ್ಹತೆ :

   ಅ. ಎಸ್.ಎಸ್.ಎಲ್.ಸಿ. ಶೇಕಡಾವಾರು ಗಳಿಸಿದ ಅಂಕಗಳು:------------

   ಆ. ಕುಶಲಕರ್ಮಿ ಎಲೆಕ್ಟ್ರೀಷಿಯನ್ ವೃತ್ತಿ ಪರೀಕ್ಷೆಯ ಶೇಕಡಾವಾರು ಗಳಿಸಿದ ಅಂಕಗಳು:---------

10) ಲಗತ್ತು:

   1) ಇಂಡಿಯನ್ ಪೋಸ್ಟಲ್ ಆರ್ಡರ್
   2) ಎಸ್.ಎಸ್.ಎಲ್.ಸಿ ಅಂಕಪಟ್ಟಿ
   3) ಕುಶಲಕರ್ಮಿ ಎಲೆಕ್ಟ್ರೀಷಿಯನ್ ವೃತ್ತಿ ಪರೀಕ್ಷೆಯ ಅಂಕಪಟ್ಟಿ
   4) ವರ್ಗಾವಣೆ ಪ್ರಮಾಣ ಪತ್ರ (ಟಿ.ಸಿ)
   5) ಜಾತಿ ಪ್ರಮಾಣಪತ್ರ
   6) ವೈದ್ಯಕೀಯ ಪ್ರಮಾಣಪತ್ರ
   7) ನಡತೆ ಪ್ರಮಾಣಪತ್ರ
   8) ಪಾಸ್ ಪೋರ್ಟ ಸೈಜಿನ ಇತ್ತಿಚಿನ 3 ಭಾವಚಿತ್ರಗಳು.
   9) ಸ್ವ–ವಿಳಾಸವಿರುವ ರೂ. 10/– ಮೌಲ್ಯದ ಅಂಚೆ ಚೀಟಿಯನ್ನು ಹಚ್ಚಿದ 4x9 ಇಂಚು ಅಳತೆಯ ಒಂದು ಲಕೋಟೆ.
   10) ಅಭ್ಯರ್ಥಿಗಳು ತರಬೇತಿ ಹೊಂದಿದ ಐ.ಟಿ.ಐ/ಐ.ಟಿ.ಸಿ ಸಂಸ್ಥೆಯ, ಎನ್.ಸಿ.ವಿ.ಟಿ ಭಾರತ ಸರ್ಕಾರದಿಂದ ಮಾನ್ಯತೆ ಪಡೆದ ಪತ್ರದ ಪ್ರತಿ.
   11) 371 (ಜೆ) ಕಾಯ್ದೆ ಅಡಿಯಲ್ಲಿ ಬರುವ ಅಭ್ಯರ್ಥಿಗಳು ಸಂಬಂಧ ಪಟ್ಟ ಅಧಿಕಾರಿಗಳಿಂದ ನೀಡಿದ ಪ್ರಮಾಣ ಪತ್ರದ ಪ್ರತಿಯನ್ನು ತಪ್ಪದೆ ಲಗತ್ತಿಸುವದು.
   12) ಈ ಮೇಲೆ ತಿಳಿಸಿರುವ ವಿವರಗಳು/ ಪ್ರಮಾಣಪತ್ರಗಳು ನಿಖರ ಹಾಗೂ ಸತ್ಯವೆಂದು ಪ್ರಮಾಣೀಕರಿಸಿರುತ್ತೇನೆ.

ಸ್ಥಳ :

ಅರ್ಜಿದಾರರ ಸಹಿ

ದಿನಾಂಕ :